7 ನಣ್ಣ ಯೋಜನೆಗಳನ್ನು ವಿಲೀನಗೊಳಿಸುವುದು

8 ಬೇರೆಯವರಿಗೆ ಪಹಿಸುವ ಕ್ಷೇತ್ರಗಳನ್ನು ಗುರುತಿಸುವುದು

2 ಅನುಷ್ಠಾನಗೊಳಿಸಲು ಯಾವುದೇ ಕಾಲಾವಕಾಶ ನಿಗದಿಪಡಿಸಿಲ್ಲವಾದರೂ, ಶಿಫಾರಸ್ಸುಗಳನ್ನು ಪರಿಶೀಲಿಸಿ ಹಂತ ಹಂತವಾಗಿ ಜಾರಿಗೊಳಿಸಲಾಗುವುದು

ನಿಷ್ಕ್ರಿಯ ಅಧಿಕಾರಿಗಳ ಕಡ್ಡಾಯ ನಿವೃತ್ತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 12(488)

ಸದಸ್ಯರ ಹೆಸರು ಶ್ರೀ ಸಭಾಪತಿ ಯು ಆರ್ (ಉಡುಪಿ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ(ಮುಖ್ಯಮಂತ್ರಿಗಳು)

ಪ್ರಶ್ನೆ

ಅ) ನಿಷ್ಕ್ರಿಯ ಅಧಿಕಾರಿಗಳನ್ನು ಕರ್ನಾಟಕ ಸಿವಿಲ್ ಸೇವಾ ನಿಯಮಗಳ 285ನೇ ನಿಯಮದ ಪ್ರಕಾರ ಕಡ್ಡಾಯ ನಿವೃತ್ತಿಗೊಳಿಸಲಾಗುವುದೇ?

ಆ) ಹಾಗಿದ್ದಲ್ಲಿ, ಕಳೆದ ಎರಡು ವರ್ಷಗಳಲ್ಲಿ ಎಷ್ಟು ಮಂದಿ ನಿಷ್ಕ್ರಿಯ ಅಧಿಕಾರಿಗಳೆಂದು ಗುರುತಿಸಲಾಗಿದೆ, ಅವರುಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಉತ್ತರ

ಅ) ಹೌದು

ಆ) ಲಭ್ಯವಿರುವ ಮಾಹಿತಿಯ ಪ್ರಕಾರ, ಈ ಕೆಳಕಂಡ ಮೂವರು ಅಧಿಕಾರಿಗಳನ್ನು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ, ಕರ್ನಾಟಕ ಸಿವಿಲ್ ಸೇವಾ ನಿಯಮಗಳ ನಿಯಮ 285(4)ರಡಿಯಲ್ಲಿ ಸೇವೆಯಿಂದ (ಕಡ್ಡಾಯವಾಗಿ) ನಿವೃತ್ತಿಗೊಳಿಸಲಾಗಿದ

1) ಶ್ರೀ ಎ ಸಿ ಫರ್ನಾಂಡೀಸ್,
ಅಬಕಾರಿ ಉಪ ಅಧೀಕ್ಷಕರು,
ಅಬಕಾರಿ ಇಲಾಖೆ

2) ಶ್ರೀ ಪಿ ಹನುಮಂತಪ್ಪ,
ಉಪ ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ

3) ಶ್ರೀ ಜಾಫರ್ ಮೊಯಿನುದ್ದೀನ್,
ಉಪ ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ

ಶ್ರೀ ಹಾರನಹಳ್ಳಿ ರಾಮಸ್ವಾಮಿ ಆಯೋಗದ ಶಿಫಾರಸ್ಸುಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 13(489)

ಸದಸ್ಯರ ಹೆಸರು ಶ್ರೀ ಅಪ್ಪಚ್ಚುರಂಜನ್ ಎಂ ಪಿ (ಸೋಮವಾರಪೇಟೆ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಗಳು)

ಪ್ರಶ್ನೆ

ಅ ಶ್ರೀ ಹಾರನಹಳ್ಳಿ ರಾಮಸ್ವಾಮಿ ಆಯೋಗದ ಶಿಫಾರಸ್ಸಿನ ಸಾರಾಂಶವೇನು? (ವಿವರಗಳನ್ನು ನೀಡುವುದು)

ಆ ಶಿಫಾರಸ್ಸಿನನ್ವಯ ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ನೌಕರುಗಳನ್ನು ಕೈಬಿಡಲು ಉದ್ದೇಶಿಸಲಾಗಿದೆ?

ಉತ್ತರ

ಅ ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ತನ್ನ ಮಧ್ಯಂತರ ವರದಿಯನ್ನು ಜನವರಿ 2001ರಲ್ಲಿ ನೀಡಿದೆ ಇದರಲ್ಲಿ ಆಯೋಗವು ಸಚಿವಾಲಯದ ಸುಧಾರಣೆ, ಜಿಲ್ಲಾ ಆಡಳಿತ ಸುಧಾರಣೆ ಮತ್ತು ಉತ್ತಮ ಆಡಳಿತ ನೀಡುವ ಬಗ್ಗೆ ಶಿಫಾರಸ್ಸು ಮಾಡಿದೆ ತನ್ನ ಅಂತಿಮ ವರದಿಯನ್ನು 27 12 2001ರಂದು ನೀಡಿದ್ದು ಅದರಲ್ಲಿ ಈ ಕೆಳಗಿನ ವಿಷಯಗಳು ಇರುತ್ತವೆ

1 ಸರಿಗಾತ್ರದ ಕ್ರಮಗಳು

2 ಆರ್ಥಿಕ ಮಿತವ್ಯಯದ ಕ್ರಮಗಳು